## ಪ್ರತಿ ಹಳ್ಳಿಯಲ್ಲೂ ಇಂಥವರಿರಲಿ

‘ಇದು ಅರಿವಿನ ಮನೆ’ (ಅ. 23, ಗಣೇಶ ಚಂದನಶಿವ) ಮುಖಪುಟ ಲೇಖನ ಓದಲು ಖುಷಿ ನೀಡಿತು. ಒಂದು ಮಗು ಓದಿ ವಿದ್ಯಾವಂತನಾದರೆ ಸಂಸಾರದ ಸದಸ್ಯರೆಲ್ಲರ ಬದುಕು ಸುಗಮ. ಓದಿನ ಹಸಿವು ನೀಗಿಸಲು ಅವಕಾಶ, ಅನುಕೂಲಗಳ ಕೊರತೆಯನ್ನು ನೀಗಿ ಸಾವಿತ್ರಿ ರಾಮ್ ಅವರು ಮಂಡೆಕೋಲು ಗ್ರಾಮದ ಮಕ್ಕಳಿಗೆ ಮನೋವಿಕಾಸ ಕೇಂದ್ರ ಮತ್ತು ಪುಸ್ತಕ ಓದುವ ಅಭಿರುಚಿಯನ್ನು ಕಲ್ಪಿಸಿರುವುದು ಶ್ಲಾಘನೀಯ. ಪ್ರತಿ ಹಳ್ಳಿಗಳಲ್ಲಿ ಸಾವಿತ್ರಿ ರಾಮ್ ಅವರಂಥ ಸರಸ್ವತಿಯರು ಸಿಗಲಿ. ಒಂದು ಪುಸ್ತಕ 10, 100 ಸ್ನೇಹಿತರಿಗೆ ಸಮ. ಇದು ಸ್ವಾನುಭವದ ಮಾತು.

—ಮಧುರಾ, ಬೆಂಗಳೂರು



## ಬೆಳಕಿನ ಮನೆಯೂ...

ಗ್ರಂಥಾಲಯಗಳು ‘ಅರಿವಿನ ಮನೆ’ಗಳು ಮಾತ್ರವಲ್ಲ; ಬೆಳಕು– ಬೆರಗಿನ ಅರಮನೆಗಳೂ ಹೌದು! (ಆದರೆ ‘ಅರಗಿನ ಮನೆ’ಗಳಲ್ಲ; ಅಮೃತಾಲಯಗಳು)

—ಸಿಪಿಕೆ, ಮೈಸೂರು

## ಜ್ಞಾನ ಪಸರಿಸಲಿ

ಗ್ರಂಥಾಲಯಗಳನ್ನು ಸಮರ್ಥವಾಗಿ ಬಳಸಿಕೊಂಡರೆ ಗ್ರಾಮೀಣ ವಿದ್ಯಾರ್ಥಿಗಳಿಗೆ ಬಹಳ ಅನುಕೂಲ ಆಗುತ್ತದೆ. ಈ ಸೌಲಭ್ಯ ಎಲ್ಲಾ ಗ್ರಾಮಗಳಲ್ಲೂ ದೊರೆಯುವಂತಾದರೆ ಜ್ಞಾನ ಹೆಚ್ಚಾಗುತ್ತದೆ. ಈ ಕೆಲಸ ಆಗಲಿ.

—ವಿಜಯ, ಬೆಂಗಳೂರು

## ಮೆಚ್ಚುವಂಥ ಕಾರ್ಯ

ಮಂಡೆಕೋಲು ಗ್ರಾಮ ಪಂಚಾಯಿತಿಯ ಗ್ರಂಥಾಲಯದ ಬಗ್ಗೆ ಓದಿ ಮೆಚ್ಚುಗೆಯಾಯಿತು. ಪ್ರತಿ ಗ್ರಾಮಗಳಲ್ಲೂ ಈ ರೀತಿ ಗ್ರಂಥಾಲಯಗಳು ಸ್ಥಾಪಿತವಾದರೆ ಮಕ್ಕಳಲ್ಲಿ ಮತ್ತು ದೊಡ್ಡವರಲ್ಲೂ ಓದುವ ಹವ್ಯಾಸ ಹೆಚ್ಚಾಗುತ್ತದೆ. ಸಾವಿತ್ರಿ ರಾಮ್ ಕೆಲಸ ಶ್ಲಾಘನೀಯ.

—ನೀಲಕಂಠಪ್ಪ ಚಿಕ್ಕಮುದ್ದೆ ಬೀರೂರು

## ಬ್ರಿಟನ್ ಎಂದರೆ ಅದ್ಭುತ



‘ಬದುಕಿನ ಪಾಠ ಕಲಿಸುವ ಬ್ರಿಟನ್’ (ಅ. 23, ಚಂದ್ರಹಾಸ ಹಿರೇಮಳಲಿ) ‘ಪ್ರವಾಸ ಕಥನ’ ಬ್ರಿಟನ್ ದೇಶದ ಪ್ರವಾಸೀ ಸ್ಥಳಗಳ ಸಂಕ್ಷಿಪ್ತ ವಿವರಣೆಯನ್ನು ಕೊಟ್ಟಿದೆ. ನಾನು 2014ರಲ್ಲಿ ಯೂರೋಪ್ ಪ್ರವಾಸದಲ್ಲಿ ಲಂಡನ್ ನಗರದ ಎಲ್ಲಾ ಪ್ರಮುಖ ಸ್ಥಳಗಳನ್ನು ನೋಡಿದ್ದೆ. ಬಕಿಂಗ್ಯಾಮ್ ಅರಮನೆಯಲ್ಲಿ ನಡೆಯುವ ಸೈನಿಕರ ಬ್ಯಾಂಡ್‌ಸೆಟ್ ನೋಡಲು ಜನ ಕಿಕ್ಕಿರಿದು ಸೇರುತ್ತಾರೆ. ಲಂಡನ್ ಐನಲ್ಲಿ ನಿಂತು ನಗರ ವೀಕ್ಷಣೆ ಅದ್ಭುತ.

—ಟಿ.ಎಸ್. ನಾಗರಾಜ ರಾವ್

## ಸಾತ್ವಿಕ ಜೀವದ ಹಾಡುಹಕ್ಕಿ

‘ಬೆಳವಲದ ಹಾಡುಹಕ್ಕಿ’ (ಅ. 23, ಪ್ರವೀಣ ಕುಲಕರ್ಣಿ) ಓದಿ ಕಣ್ಣಾಲಿಗಳು ಒದ್ದೆಯಾದವು. ನಿರೂಪಕನಾಗಿ ಎಂಟು ವರ್ಷ ಅನುರಾಧಾ ಧಾರೇಶ್ವರ ಅವರೊಂದಿಗೆ ಸಹೋದ್ಯೋಗಿಯಾಗಿದ್ದ ಸಂದರ್ಭದ ಅನುಭವಗಳನ್ನು ಇಲ್ಲಿ ತೆರೆದಿಟ್ಟಿದ್ದೇನೆ. ಧಾರೇಶ್ವರ ಅವರದ್ದು ಶಾಂತ ಸ್ವಭಾವ. ‘ವಜ್ರಾದಪಿ ಕಠೋರಾಣಿ, ಮೃದೂನಿ ಕುಸುಮಾದಪಿ’ ಎಂಬಂತೆ. ಕೆಲವೊಮ್ಮೆ ಮುಳಮಿಡ್ಡಿಯಿಂದ, ಕಲೆಕ್ಟರ್ ಕಾಂಪೌಂಡ್ ದಾಟಿ ನಿರ್ಜನಮಯವಾಗಿದ್ದ ಥೇಟರ್ ಪಕ್ಕದ ಮೈದಾನ ದಾಟಿ ಕರ್ನಾಟಕ ಕಾಲೇಜ್ ಪಕ್ಕದ ಆಕಾಶವಾಣಿ ಕಚೇರಿಯನ್ನು ಅವರು ತಲುಪಬೇಕಾಗುತ್ತಿತ್ತು. ಎಂದೂ ತಡವಾಗಿ ಬಂದವರಲ್ಲ. 10 ನಿಮಿಷ ಮುಂಚೆಯೇ ಹಾಜರು. ಮುಂಜಾನೆ 11ರಿಂದ 5ರವರೆಗೆ ನನ್ನ ಕರ್ತವ್ಯ ಮುಗಿಸುವಾಗ, ಸಂಜೆ ಕೆಲಸವಿದ್ದ ಧಾರೇಶ್ವರ ಅವರು ಠೀಕಾಗಿ 5 ಗಂಟೆಗೆ ನನ್ನನ್ನು ಬಿಡುಗಡೆಗೊಳಿಸುತ್ತಿದ್ದರು. ಪ್ರಾಮಾಣಿಕತೆ ಅವರ ಆಸ್ತಿಯಾಗಿತ್ತು. ಅನವಶ್ಯಕ ಮಾತುಗಳನ್ನು ಆಡುತ್ತಲೇ ಇರಲಿಲ್ಲ. ಸರಳ, ಪ್ರಾಮಾಣಿಕ, ಸೌಮ್ಯ, ಸಾತ್ವಿಕ ಜೀವದ ಹಾಡುಹಕ್ಕಿ ಕಾಣದ ಲೋಕಕ್ಕೆ ಹಾರಿಹೋಗಿದೆ. ಜೀವನದಲ್ಲಿ ಅನೇಕ ದುರ್ಬರ ಪ್ರಸಂಗಗಳಿಗೆ (ಅವರಷ್ಟೇ ವೈಯಕ್ತಿಕ) ದುಃಖ ತುಂಬಿ, ಮೂಕಸಾಕ್ಷಿಯಾಗಿದ್ದರು.

—ಕೆ.ಎಂ. ಮಧ್ವರಾಯ

## ಮನಸ್ಸು ತುಂಬಿತು

‘ಆರದ ಆಶಾವಾದದ ಹಣತೆ ಜೇನ್ ಗುಡಾಲ್’ (ಅ. 23, ನೇಮಿಚಂದ್ರ) ಲೇಖನ ಓದಿ ಮನಸ್ಸು ತುಂಬಿ ಬಂತು. ಜೇನ್ ಗುಡಾಲ್ ಹಾಗೂ ಚಿಂಪಾಂಜಿಗಳ ಒಡನಾಟವನ್ನು ನ್ಯಾಷನಲ್ ಜಿಯೋಗ್ರಾಫಿಕ್ ಚಾನಲ್‌ನಲ್ಲಿ ನೋಡಿದ್ದೆ. ಅಂತಹ ತುಂಬು ಜೀವನ ಸಾರ್ಥಕದ ಬಗ್ಗೆ ಓದಿ ಅರಿವು ಮೂಡಿತು.



—ಕಮಲಾರಾವ್, ಬೆಂಗಳೂರು

## ಉತ್ತಮ ಸಲಹೆ

‘ಆರೋಗ್ಯಸ್ನೇಹಿ ಅಡುಗೆ ಮನೆ’ (ಅ. 16, ರಾಮ್‌ಕದಮ್) ಲೇಖನ ಓದಿ ನಾನು ಸಹ ಈ ರೀತಿ ಅಡುಗೆ ಮಾಡಲು ಪ್ರಾರಂಭಿಸಿದ್ದೇನೆ. ಮೊದಲು ಬರೀ ಹಬ್ಬ ಹರಿದಿನಗಳಲ್ಲಿ ಮಾತ್ರ ಈ ರೀತಿ ಒಲೆಯನ್ನು ಕೆಳಗೆ ಇಟ್ಟುಕೊಳ್ಳುತ್ತಿದ್ದು. ದಿನ ನಿತ್ಯ ಈ ರೀತಿ ಮಾಡುವುದರಿಂದ ದೇಹಕ್ಕೆ ಸ್ವಲ್ಪ ಆರಾಮ ಸಿಗುತ್ತದೆ. ಒಳ್ಳೆಯ ಐಡಿಯಾ.

—ಧನಲಕ್ಷ್ಮಿ ಪುರುಷೋತ್ತಮ ರಾವ್, ಕೋಲಾರ


## ವಿಭಿನ್ನತೆ ಬೇಕಿತ್ತು

‘ಭಾರತಿ ಸಾಲಿಯಾನ್ ಮತ್ತು ರಾಹುಲ’ (ಅ. 23, ಕೇಶವ ಶರ್ಮ ಕೆ.) ಕಥೆ ಚೆನ್ನಾಗಿದೆ. ಆದರೆ ಕಥೆಯಲ್ಲಿ ಭಾರತಿ ಒಬ್ಬಳ ಭಾವನೆಗಳನ್ನು ಮಾತ್ರ ಹೇಳಲಾಗಿದೆ. ರಾಹುಲನ ಭಾವನೆಗಳು ಭಾರತೀಯಳ ಭಾವನೆಗಳಿಗೆ ಸ್ಪಂದಿಸುವಂತೆ ಕಾಣಿಸಲಿಲ್ಲ. ಕಥೆಯ ನಿರೂಪಣೆ ಸ್ವಲ್ಪ ವಿಭಿನ್ನವಾಗಿದ್ದಿದ್ದರೆ ಇನ್ನೂ ಒಳ್ಳೆಯ ಕಥೆ ಆಗುತ್ತಿತ್ತು.

—ಸಂಪತ್ ಕುಮಾರ್, ಅಜ್ಜಂಪುರ

## ಗದಗ ಜಿಲ್ಲೆಯ ಸೊಗಸಾದ ಚಿತ್ರಣ

‘ನೋಡು ಬಾ ನೋಡು ಬಾ ನಮ್ಮೂರ...’ (ಅ. 23, ಶಾರದಾ ಬಾಣದ) ‘ಚೆನ್ನುಡಿ’ ಸರಳ ಸುಂದರವಾಗಿದೆ. ಬಯಲುಸೀಮೆ ಗದಗ ಜಿಲ್ಲೆಯ ಭಾಷೆಯ ಸೊಗಸನ್ನು ಒಂದು ಸುಂದರ ಹಾಡಿನೊಂದಿಗೆ ಆರಂಭ ಮಾಡಿರುವುದು ಚೆನ್ನಾಗಿದೆ. ಗದಗ ಜಿಲ್ಲೆಯ ವಿಶೇಷಗಳನ್ನು, ಐತಿಹಾಸಿಕ, ಧಾರ್ಮಿಕ, ಪ್ರಾಕೃತಿಕ ಸ್ಥಳಗಳನ್ನು, ಅಲ್ಲಿನ ಸ್ಪೆಷಲ್ ತಿನಿಸುಗಳನ್ನು ಪರಿಚಯಿಸಿದ ಧಾಟಿಯೂ ಹಿಡಿಸಿತು. ಗದಗ ಜಿಲ್ಲೆಯ ಒಟ್ಟಾರೆ ಚಿತ್ರಣವನ್ನು ಕಟ್ಟಿಕೊಟ್ಟಿತು.



—ಚೇತನ್ ಕುಮಾರ್, ಮೈಸೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in